ವಿದ್ಯುತ್ ತಂತಿ ಮತ್ತು ಕಬ್ಬಿಣದ ಕಂಬಗಳನ್ನು ಬದಲಾಯಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಬೀದರ್ ಜಿಲ್ಲೆಯಲ್ಲಿನ ಕಾಮಗಾರಿಗಳು

1880 (3074); ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಬೀದರ್ ಜಿಲ್ಲೆಯಲ್ಲಿ ರಾಜ್ಯ ಹೆದ್ದಾರಿ ಯೋಜನೆಯಡಿಯಲ್ಲಿ ಎಸ್.ಹೆಚ್.ಡಿ.ಪಿ.1 ಮತ್ತು 2 ಹಾಗೂ ಕೆ.ಆರ್.ಡಿ.ಸಿ.ಎಲ್. ವತಿಯಿಂದ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. (ಸಂಪೂರ್ಣ ವಿವರ ನೀಡುವುದು);

ಆ) ಎಷ್ಟು ಕಾಮಗಾರಿಗಳು ನಿಗದಿತ ಸಮಯದಲ್ಲಿ ಮುಗಿದಿವೆ; ಎಷ್ಟು ವಿಳಂಬವಾಗಿವೆ; ವಿಳಂಬವಾಗಲು ಕಾರಣರಾದ ಗುತ್ತಿಗೆದಾರರು ಹಾಗೂ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು);

ಇ) ನಿಗದಿತ ಕಾಲಮಿತಿಯಲ್ಲಿ ಬಾಕಿ ಉಳಿದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಡಾ: ಹೆಚ್. ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) ಎಸ್.ಹೆಚ್.ಡಿ.ಪಿ: ಬೀದರ್ ಜಿಲ್ಲಾ ವ್ಯಾಪ್ತಿಯಲ್ಲಿ ಹಂತ–01 ರಲ್ಲಿ ಮೂರು ಕಾಮಗಾರಿಗಳು ಮತ್ತು ಹಂತ–02 ರಲ್ಲಿ ಒಂದು ಕಾಮಗಾರಿ ಒಟ್ಟು ನಾಲ್ಕು ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ.

ಹಂತ–1

1. ಹುಮ್ನಾಬಾದ್–ಬೀದರ್ ರಾಜ್ಯ ಹೆದ್ದಾರಿ ಸಂಖ್ಯೆ– 105 ಸರಪಳಿ 0.00 ರಿಂದ 45.40 ರವರೆಗೆ ಅಭಿವೃದ್ಧಿಗೊಳಿಸುವ ಕಾಮಗಾರಿ ಅಂದಾಜು ಮೊತ್ತ `1307.00 ಲಕ್ಷಗಳು (ಪ್ಯಾಕೇಜ್ ಸಂಖ್ಯೆ–35)

2. ವನಮಾರಪಳ್ಳಿ–ರಾಯಚೂರು ರಾಜ್ಯ ಹೆದ್ದಾರಿ–15 ಸರಪಳಿ 0.00 ಕಿ.ಮೀ. ಯಿಂದ 90.60 ರವರೆಗೆ ಅಭಿವೃದ್ಧಿಗೊಳಿಸುವ ಕಾಮಗಾರಿ ಅಂದಾಜು ಮೊತ್ತ `2271.00 ಲಕ್ಷಗಳು (ಪ್ಯಾಕೇಜ್ ಸಂಖ್ಯೆ–36)

3. ಔರಾದ್–ಸದಾಶಿವಗಡ್ ರಾಜ್ಯ ಹೆದ್ದಾರಿ–34 ಸರಪಳಿ 0.00 ಕಿ.ಮೀ. ಯಿಂದ 138.67 ರವರೆಗೆ ಅಭಿವೃದ್ಧಿಗೊಳಿಸುವ ಕಾಮಗಾರಿ ಅಂದಾಜು ಮೊತ್ತ `2664.83 ಲಕ್ಷಗಳು (ಪ್ಯಾಕೇಜ್ ಸಂಖ್ಯೆ–37)

ಹಂತ–2

4. (ಎ) ಬಾಲ್ಕಿ–ಚಿಂಚೋಳ್ಳಿ ರಾಜ್ಯ ಹೆದ್ದಾರಿ–75 ಸರಪಳಿ 0.00 ಕಿಮೀ. ಯಿಂದ 51.00 ರವರೆಗೆ ಅಭಿವೃದ್ಧಿಗೊಳಿಸುವ ಕಾಮಗಾರಿ (ಬಿ) ಬಸವಕಲ್ಯಾಣ–ರಾಯಚೂರು ರಾಜ್ಯ ಹೆದ್ದಾರಿ – 51 ಸರಪಳಿ 0.00 ರಿಂದ 33.00 ರವರೆಗೆ ಅಭಿವೃದ್ಧಿಗೊಳಿಸುವ ಕಾಮಗಾರಿ ಅಂದಾಜು ಮೊತ್ತ `1989.24 ಲಕ್ಷಗಳು (ಪ್ಯಾಕೇಜ್ ಸಂಖ್ಯೆ–67)

ಕೆ.ಆರ್.ಡಿ.ಸಿ.ಎಲ್: ವಿವರಗಳನ್ನು ಅನುಬಂಧ–1 ಮತ್ತು 2 ರಲ್ಲಿ ನೀಡಲಾಗಿದೆ.

ಆ) ಎಸ್.ಹೆಚ್.ಡಿ.ಪಿ. ಹಂತ–1ರ 3 ಪ್ಯಾಕೇಜ್‌ಗಳ ಪೈಕಿ ಪ್ಯಾಕೇಜ್–35 ನಿಗಧಿತ ಅವಧಿಯಲ್ಲಿ ಮುಕ್ತಾಯಗೊಂಡಿರುತ್ತದೆ. ಪ್ಯಾಕೇಜ್–36, 37 ಮೇ 2014ರಲ್ಲಿ ಪೂರ್ಣಗೊಳ್ಳಬೇಕಾಗಿತ್ತು, ಆದರೆ ಟೆಂಡರ್ ಮಿತಿ ಯಿಂದ ಹೆಚ್ಚುವರಿ ಕಾಮಗಾರಿಗಳನ್ನು ನಿರ್ವಹಿಸಬೇಕಾದ ಕಾರಣ ಆಗಸ್ಟ್ 2014ರೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಹಂತ–2 ರ ಪ್ಯಾಕೇಜ್–67 ಜನವರಿ–2014 ರಲ್ಲಿ ಪ್ರಾರಂಭಿಸಿದ್ದು, ಡಿಸೆಂಬರ್ 2014ರ ಟೆಂಡರ್ ಅವಧಿಯೊಳಗೆ ಪೂರ್ಣಗೊಳಿಸ ಲಾಗುವುದು.

ಕೆ.ಆರ್.ಡಿ.ಸಿ.ಎಲ್. ವತಿಯಿಂದ ಬೀದರ್ ಜಿಲ್ಲೆಯಲ್ಲಿ 13 ಸೇತುವೆ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಭೂಸ್ವಾಧಿನ ಪ್ರಕ್ರಿಯೆ ಹಾಗೂ

ಗುತ್ತಿಗೆದಾರರಿಂದ ವಿಳಂಬ ಕಾರಣಗಳಿಂದ ನಿಗಧಿತ ಸಮಯದಲ್ಲಿ ಈ 13 ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ. ತದನಂತರ ಪೂರ್ಣಗೊಳಿಸಲಾಗಿರುತ್ತದೆ. ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

ಇ) ನಿಗಧಿತ ಕಾಲಮಿತಿಯಲ್ಲಿ ಬಾಕಿ ಉಳಿದ ರಸ್ತೆಯ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ ಮತ್ತು ಸಂಬಂಧಪಟ್ಟ ಗುತ್ತಿಗೆದಾರರಿಗೆ ಕೂಡಲೇ ಪೂರ್ಣಗೊಳಿಸಲು ತಿಳುವಳಿಕೆ ಪತ್ರಗಳನ್ನು ನೀಡಿ ಕ್ರಮ ಕೈಗೊಳ್ಳಲಾಗುತ್ತಿದೆ ಮತ್ತು ಕೆಆರ್‌ಡಿಸಿಎಲ್ ವತಿಯಿಂದ ಕೈಗೊಳ್ಳಲಾದ ಎಲ್ಲ 13 ಸೇತುವೆ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

ಅನುಬಂಧ–1

ಬೀದರ್ ಜಿಲ್ಲೆಗೆ ಸಂಬಂಧಿಸಿದ ರಸ್ತೆ ಕಾಮಗಾರಿಗಳ ವಿವರ

ಕ್ರ. ಸಂ.	ಜಿಲ್ಲೆ / ತಾಲ್ಲೂಕು	ಕಾಮಗಾರಿಯ ಹೆಸರು	ಷರಾ
1	ಬೀದರ್	ಬೀದರ್–ಚಿಂಚೋಳಿ ವಯಾ ಮುನ್ನಾ ಎಕ್ಕಳ್ಳಿ ರಸ್ತೆಯ 60.04 ಕಿ.ಮೀ. ಉದ್ದದ ರಸ್ತೆ ಅಭಿವೃದ್ಧಿ ಕಾಮಗಾರಿ	ಸದರಿ ಕಾಮಗಾರಿಯನ್ನು ವಿಶ್ವಬ್ಯಾಂಕ್ ನೆರವಿನೊಂದಿಗೆ ತೆಗೆದುಕೊಳ್ಳಲಾಗಿದೆ. ಕಾಮಗಾರಿಯ ಅಂದಾಜು ಮೊತ್ತ `181 ಕೋಟಿಗಳು ಸದರಿ ಟೆಂಡರ್ ಕರೆದಿದ್ದು, ಆರ್.ಎಫ್.ಕ್ಯೂ ಹಂತದಲ್ಲಿ 19 ಸಂಖ್ಯೆ ಗುತ್ತಿಗೆದಾರರು ಭಾಗವಹಿಸಿದ್ದಾರೆ. ಈ ಆರ್.ಎಫ್.ಕ್ಯೂ. ಮೌಲ್ಯಮಾಪನ ಪ್ರಗತಿಯಲ್ಲಿದೆ.

ಅನುಬಂಧ–2

ಬೀದರ್ ಜಿಲ್ಲೆಗೆ ಸಂಬಂಧಿಸಿದ ಸೇತುವೆ ಕಾಮಗಾರಿಗಳ ವಿವರ

ಕ್ರ. ಸಂ.	ಜಿಲ್ಲೆ / ತಾಲ್ಲೂಕು	ಕಾಮಗಾರಿಯ ಹೆಸರು	ಗುತ್ತಿಗೆ ಕರಾರಿನಂತೆ ಕಾಮಗಾರಿ ಪ್ರಾರಂಭದ ದಿನಾಂಕ	ಗುತ್ತಿಗೆ ಕರಾರಿನಂತೆ ಕಾಮಗಾರಿ ಮುಕ್ತಾಯ ದಿನಾಂಕ	ವಾಸ್ತವಿಕವಾಗಿ ಕಾಮಗಾರಿ ಪೂರ್ಣಗೊಂಡ ದಿನಾಂಕ	ಷರಾ
1	ಬೀದರ್	ಬೀದರ್ ಜಿಲ್ಲೆಯ ವನಮಾರಪಲ್ಲಿ – ರಾಯಚುರು (ರಾ.ಹೆ.–15) ರಸ್ತೆಯ ಕಿ.ಮೀ. 57.05 ರಲ್ಲಿ ಕಮಠಾಣಾ ಗ್ರಾಮದ ಹತ್ತಿರ ಸೇತುವೆ ನಿರ್ಮಾಣ	ಮೇ 2005	ಮೇ 2008	ಮಾರ್ಚ 2009	
2	ಔರಾದ್	ಬೀದರ್ ಜಿಲ್ಲೆಯ ವನಮಾರಪಲ್ಲಿ–ರಾಯಚೂರು	ಮೇ 2005	ಮೇ 2008	ಏಪ್ರಿಲ್ 2009	

		(ರಾ.ಹೆ–15) ರಸ್ತೆಯ ಕಿ.ಮೀ. 4.20 ರಲ್ಲಿ ನಾರಾಯಣಪುರ ಗ್ರಾಮದ ಹತ್ತಿರ ಸೇತುವೆ ನಿರ್ಮಾಣ				
3	ಔರಾದ್	ಬೀದರ್ ಜಿಲ್ಲೆಯ ವನಮಾರಪಲ್ಲಿ–ರಾಯಚೂರು (ರಾ.ಹೆ–15) ರಸ್ತೆಯ ಕಿ.ಮೀ. 10.20 ರಲ್ಲಿ ಸೇತುವೆ ನಿರ್ಮಾಣ	ಮೇ 2005	ಮೇ 2008	ನವೆಂಬರ್ 2008	
4	ಔರಾದ್	ಬೀದರ್ ಜಿಲ್ಲೆಯ ಮುರ್ಕಿ ಸರಹದ್ದಿನಿಂದ ಕರ್ಜಗಿ ಸರಹದ್ದಿನ ರಸ್ತೆಯ ಕಿ.ಮೀ. 14.80 ರಲ್ಲಿ ಕೋಟಗಿಯ ನಾಲಾಕ್ಕೆ ಅಡ್ಡಲಾಗಿ ಸೇತುವೆ ನಿರ್ಮಾಣ	ಮೇ 2005	ಮೇ 2008	ಏಪ್ರೀಲ್ 2009	5

5	ಔರಾದ್	ಬೀದರ್ ಜಿಲ್ಲೆಯ ಮುರ್ಕಿ ಸರಹದ್ದಿನಿಂದ ಕರ್ಜಗಿ ಸರಹದ್ದಿನ ರಸ್ತೆಯ ಕಿ.ಮೀ. 31.10 ರಲ್ಲಿ ಯಕ್ಕಂಬಾ ನಾಲಾಕ್ಕೆ ಅಡ್ಡಲಾಗಿ ಸೇತುವೆ ನಿರ್ಮಾಣ	ಮೇ 2005	ಮೇ 2008	ಆಗಸ್ಟ್ 2008	
6	ಹುಮನಾಬಾದ್	ಬಿದರ್ ಜಿಲ್ಲೆಯ ಮಾಣಿಕ ನಗರದ ಕೂಡ ರಸ್ತೆಯ ಕಿ.ಮೀ. 0.60 ರಲ್ಲಿ ಸೇತುವೆ ನಿರ್ಮಾಣ. ಈ ಸೇತುವೆ ನಿರ್ಮಾಣ ಕಾಮಗಾರಿಯನ್ನು ಡಿಸೆಂಬರ್–2006ರಲ್ಲಿ ತೆಗೆದುಕೊಂಡು ಮೇ–2009ರಲ್ಲಿ ಪೂರ್ಣಗೊಳಿಸಲಾಗಿದೆ.	ಮೇ 2005	ಮೇ 2008	ಮೇ 2009	

7	ಭಾಲ್ಕಿ	ಬೀದರ್ ಜಿಲ್ಲೆಯ ರಾ.ಹೆ. 34ರಲ್ಲಿ ನಿಟ್ಟೂರು (ಬಿ) ಗ್ರಾಮದ ಹತ್ತಿರ ಮಾಂಜ್ರಾ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ	ಆಗಸ್ಟ್ 2006	ಆಗಸ್ಟ್ 2009	ಜೂನ್ 2014	ಭೂಸ್ವಾಧೀನ ಪ್ರಕ್ರಿಯೆ ಕಾರಣದಿಂದ ಸದರಿ ಸೇತುವೆ ಕಾಮಗಾರಿಯು ವಿಳಂಬವಾಗಿರುತ್ತದೆ.
8	ಹುಮನಾಬಾದ್	ಬೀದರ್ ಜಿಲ್ಲೆಯ ಹುಡಗಿ–ಚಿಡಗುಪ್ಪ–ಐನಾಪುರ ರಸ್ತೆಯ ಕಿ.ಮೀ. 7.50 ರಲ್ಲಿ ಸೇತುವೆ ನಿರ್ಮಾಣ	ಆಗಸ್ಟ್ 2006	ಆಗಸ್ಟ್ 2009	ಫೆಬ್ರವರಿ 2010	
9	ಬೀದರ್	ಬೀದರ್ ಜಿಲ್ಲೆಯ ಬೀದರ್ – ಮನಳ್ಳಿ– ಭಾಗನೂರ ರಸ್ತೆಯ (ನಾಗೂರ–ಯಕ್ತಾಪೂರ ಮಧ್ಯದಲ್ಲಿ) ಕಿ.ಮೀ. 13.70 ರಲ್ಲಿ ಸೇತುವೆ ನಿರ್ಮಾಣ	ಆಗಸ್ಟ್ 2006	ಆಗಸ್ಟ್ 2009	ಫೆಬ್ರವರಿ 2010	

10	ಭಾಲ್ಕಿ	ಬೀದರ್ ಜಿಲ್ಲೆಯ ಔರಾದ್ ಸದಾಶಿವಗಡ (ರಾ.ಹೆ.34) ರಸ್ತೆಯ ಕಿ.ಮೀ. 39.60ರಲ್ಲಿ ಸೇತುವೆ ನಿರ್ಮಾಣ	ಅಕ್ಟೋಬರ್ 2007	ಅಕ್ಟೋಬರ್ 2010	ಮಾರ್ಚ 2012	
11	ಬಸವಕಲ್ಯಾಣ	ಬೀದರ್ ಜಿಲ್ಲೆಯ ಬಸವಕಲ್ಯಾಣ–ರಾಜೋಳಾ ರಸ್ತೆಯ ಕಿ.ಮೀ. 4.00 ರಲ್ಲಿ ಸೇತುವೆ ನಿರ್ಮಾಣ	ಅಕ್ಟೋಬರ್ 2007	ಅಕ್ಟೋಬರ್ 2010	ಮಾರ್ಚ 2012	
12	ಹುಲಸೂರು	ಬೀದರ್ ಜಿಲ್ಲೆಯ ಹುಲಸೂರ–ಮಹಾಗಾಂವ (ರಾ.ಹೆ. 11) ರಸ್ತೆಯ ಕಿ.ಮೀ. 16.00 ರಲ್ಲಿ ಬೆಲ್ಲೋರಾ ಹಳ್ಳಕೆ ಅಡ್ಡಲಾಗಿ ಸೇತುವೆ ನಿರ್ಮಾಣ	ಅಕ್ಟೋಬರ್ 2007	ಅಕ್ಟೋಬರ್ 2010	ಮಾರ್ಚ 2012	